ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 14 ವಿಧಾನ ಪರಿಷತ್ - ಸದನ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 5/1/2021

# ಪರಿಷತ್ ಕಹಿ ತನಿಖೆಗೆ ಸದನ ಸಮಿತಿ

■ **ವಿಕ ಸುದ್ದಿಲೋಕ** ಬೆಂಗಳೂರು 5/1/21

ವಿಧಾನ ಪರಿಷತ್ತಿನಲ್ಲಿ ಡಿ.15 ರಂದು ನಡೆದ ಘಟನಾವಳಿಗಳ ವಿಚಾರಣೆಗೆ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡರ ನೇತೃತ್ವದಲ್ಲಿ ಸದನ ಸಮಿತಿ ರಚಿಸಲಾಗಿದೆ.

ಈ ಸಮಿತಿಗೆ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಆರ್.ಬಿ.ತಿಮ್ಮಾಪುರ, ಬಿಜೆಪಿಯ ಎಚ್.ವಿಶ್ವನಾಥ್, ಎಸ್.ವಿ. ಸಂಕನೂರು ಅವರನ್ನು ಸದಸ್ಯರನ್ನಾಗಿ ನೇಮಿಸಿ 20 ದಿನಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿ ಕಾರ್ಯದರ್ಶಿ ಕೆ. ಆರ್.ಮಹಾಲಕ್ಷ್ಮೀ ಆದೇಶ ಹೊರಡಿಸಿದ್ದಾರೆ. ಸದನದಲ್ಲಿ ನಡೆದ ಅಹಿತಕರ ಘಟನೆ ಕುರಿತು ವಿಚಾರಣೆ ನಡೆಸಿ ವರದಿ ಹಾಗೂ ಘಟನೆಗೆ ಕಾರಣರಾದವರ ಮೇಲೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಶಿಫಾರಸು ಮಾಡಲು ಸಮಿತಿಗೆ ಸೂಚಿಸಲಾಗಿದೆ.

ವಿಚಾರಣೆ ವೇಳೆ ಪರಿಶೀಲನೆಗೆ ಒಳಪಡಬಹುದಾದ 5 ಅಂಶ ಗುರುತಿಸಲಾಗಿದೆ.

## ತನಿಖೆಯ 5 ಅಂಶಗಳು

- ಡಿ.15 ರಂದು ಸದನದಲ್ಲಿ ನಡೆದ ಘಟನೆಯಲ್ಲಿನ ನಿಯಮಬಾಹಿರ ಹಾಗೂ ಕಾನೂನು ಬಾಹಿರ ವರ್ತನೆ ಅಂಶಗಳ ಪರಿಶೀಲನೆ.
- ಘಟನೆಗೆ ಕಾರಣರಾದ ಸಚಿವಾಲಯ ಅಧಿಕಾರಿ/ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಸದನದ ಸದಸ್ಯರು, ಸಚಿವರು, ಇತರರ ಬಗ್ಗೆ ಪರಿಶೀಲನೆ.
- ಕಾಂಗ್ರೆಸ್, ಬಿಜೆಪಿ ಸದಸ್ಯರು ಸಭಾಪತಿಯವರಿಗೆ ಸಲ್ಲಿಸಿರುವ ಪತ್ರ ಪರಿಶೀಲನೆ.
- ಕಾರ್ಯದರ್ಶಿಯವರಿಗೆ ಸಭಾಪತಿ ನೀಡಿರುವ ನೋಟಿಸ್ ಮತ್ತು ಅದಕ್ಕೆ ನೀಡಿರುವ ಉತ್ತರ.
- ಘಟನೆಗೆ ಸಂಬಂಧಿಸಿದ ಹಾಗೂ ಘಟನೆ ನಡೆದ ದಿನದಿಂದ ಸಮಿತಿ ರಚನೆ ಆಗುವವರೆಗೆ ಪೀಠ ಮತ್ತು ಸದನದ ಗೌರವಕ್ಕೆ ಚ್ಯುತಿ ತರುವ ಅಂಶಗಳು.

# ತಜ್ಞರುಗಳಿಂದ ಆತ್ಮಾವಲೋಕನ ಸಭೆ

**ಬೆಂಗಳೂರು:** ಪರಿಷತ್‌ನಲ್ಲಿ ನಡೆದ ಅನಪೇಕ್ಷಿತ ಘಟನೆ ಹಿನ್ನೆಲೆಯಲ್ಲಿ ಆತ್ಮಾವಲೋಕನ ಸಂಬಂಧ ಸಮಾಲೋಚನಾ ಸಭೆ ನಡೆಸಲಾಗುವುದು ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಸೋಮವಾರ ಮಾತನಾಡಿ, ''ಪರಿಷತ್‌ನಲ್ಲಿ ನಡೆದ ಘಟನೆ ವಿಷಾದನೀಯ. ಹಾಗಾಗಿ ಆತ್ಮಾವಲೋಕನ ಅವಶ್ಯವಿದೆ. ಈ ಬಗ್ಗೆ ಸಂವಿಧಾನ ತಜ್ಞರು, ವಿಧಾನಮಂಡಲದ ಹಿರಿಯರು ಹಾಗೂ ದಶಕಗಳ ಕಾಲ ಕಲಾಪ ವರದಿ ಮಾಡಿದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಶೀಘ್ರ ಸಭೆ ನಡೆಸಲಾಗುವುದು. ಸಂಸದೀಯ ಮೌಲ್ಯ ಕುಸಿಯುವುದನ್ನು ತಡೆಯಲು ಈ ಮಂಥನ ನಡೆಸಲಾಗುವುದು,'' ಎಂದರು.